ಇವೆ ಆಂಥಾ ಕಡೆಗಳಲ್ಲಿ ನೂರು ಬಂದರೆ ಏನ್‌ಕ್ವೈರಿ ಮಾಡಿ ಅದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಸರ್ಕಾರೀ ಹಾಸ್ಟೆಲ್ಸ್‌ಗಳು ಏನು ಇವೆ ಅಲ್ಲಿಗೆ ಆಗಾಗ್ಗೆ ಹೋಗಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಮತ್ತು ಈಗ ಮಾನ್ಯ ಸದಸ್ಯರು ತುಮಕೂರಿನ ಕಾನೂನು ಕಾಲೇಜಿನ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ಖುದ್ದಾಗಿ ಎನ್‌ಕ್ವೈರಿ ಮಾಡಿಸಲಿಕ್ಕೆ ಹಚ್ಚುತ್ತೇನೆ. ಏನಾದರೂ ಅದರಲ್ಲಿ ಲೋಪದೋಷಗಳು ಇದ್ದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ. ಈಗ ತಾನೇ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿದ್ದಾರೆ, ಆ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

(iii) ಬೆಂಗಳೂರಿನ ಚಿತ್ರ ಮಂದಿರಗಳ ನೌಕರರ ಮುಷ್ಕರ

ಶ್ರೀ ಜಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಿಂದ ಇಡೀ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಎಲ್ಲಾ ಚಿತ್ರಮಂದಿರಗಳು ಬಂದ್ ಆಗಿದ್ದು ಚಿತ್ರ ಮಂದಿರಗಳ ನೌಕರರು ಪೈಕೋರ್ಟಿನ ತೀರ್ಪಿನಂತೆ ವೇತನ ಮತ್ತು ತುಟ್ಟಿಭತ್ಯೆ ಕೊಡಬೇಕೆಂದು ಚಿತ್ರಮಂದಿರಗಳ ಮಾಲೀಕರಿಗೆ ಮಾಡಿದ ಮನವಿಗಳು ವಿಫಲವಾಗಿ ಅನಿವಾರ್ಯವಾಗಿ ಅವರು ಮುಷ್ಕರ ನಡೆಸುತ್ತಿರುವುದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಅನಿವಾರ್ಯವಾಗಿ ನ್ಯಾಯುವಾದ ಬೇಡಿಕೆ ಈಡೇರದಿದ್ದಕ್ಕೆ ಸಾರ್ವಜನಿಕರು ಈ ಚಳುವಳಿಯಲ್ಲಿ ಪ್ರವೇಶ ಮಾಡುವ ಸಂದರ್ಭವಿದೆ.

ಕಳೆದ ಒಂದು ವಾರದಿಂದ ಚಿತ್ರಮಂದಿರಗಳ ಬಂದ್‌ನಿಂದ ಚಿತ್ರಪ್ರೇಮಿಗಳಿಗೂ ತೊಂದರೆ ಆಗಿದೆ. ತಕ್ಷಣ ಸರ್ಕಾರ ಮಧ್ಯ ಪ್ರವೇಶಿಸಿ, ನೌಕರರ ನ್ಯಾಯವಾದ ಬೇಡಿಕೆಯನ್ನು ಈಡೇರಿಸುವಂತೆ ಚಿತ್ರ ಮಂದಿರಗಳ ಮಾಲೀಕರ ಮನವೊಲಿಸುವ ಬಗ್ಗೆ ಈವರೆಗೆ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದವರ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ (ಯುವಜನ ಸೇವಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಿಂದ ಚಲನಚಿತ್ರಮಂದಿರದ ಮಾಲೀಕರ ಮತ್ತು ನೌಕರರ ಮುಷ್ಕರದಿಂದಾಗಿ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಲೇಬರ್ ಕಮಿಷನರ್ ಇವೊತ್ತು ೧೧ ಗಂಟೆಗೆ ಮೀಟಿಂಗ್ ಅನ್ನು ಕರೆದಿದ್ದರು. ಈ ವಿಷಯವನ್ನು ಬಗೆಹರಿಬೆಸಕೆದುಕರೆದಿದ್ದರು ಮೊನ್ನೆ ಶನಿವಾರ ಸಹ ಲೇಬರ್ ಕಮೀಷನರ್ ಒಂದು ಇನ್‌ಫಾರ್ಮಲ್ ಮೀಟಿಂಗ್‌ನ್ನು ಸಹ ಕರೆದಿದ್ದರು. ಆಮೀಟಿಂಗ್‌ಗೆ ಮಾಲೀಕರು ಬರಲಿಲ್ಲ, ನೌಕರರು ಬಂದಿದ್ದರು. ಮತ್ತೆ ಆ ವಿಷಯವಾಗಿ ಮಾತುಕತೆ ನಡೆಯುವುದಕ್ಕೆ ಇವೊತ್ತು ೧೧ ಗಂಟೆಗೆ ಮೀಟಿಂಗ್ ಇಟ್ಟಿದ್ದರು. ಅದರಲ್ಲಿ ಏನಾಯಿತೋ ಏನೋ ಇನ್ನೂ ಗೊತ್ತಿಲ್ಲ. ನಾಳೆ ದಿವಸ ವಿವರಗಳನ್ನು ತಿಳಿಸಿ ಇದರ ಪೂರ್ಣ ನಿರ್ಧಾರ ಏನಾಯಿತು ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

IV ರಾಜ್ಯದಲ್ಲಿ ೧೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವುದು :

ಶ್ರೀ ಆರ್. ಎನ್. ನಾಯ್ಕ.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಾದ್ಯಂತ ಹೋಟಲುಗಳಲ್ಲಿ ಮತ್ತು ಕೆಲವು ಕಾರ್ಖಾನೆಗಳಲ್ಲಿ ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಅಂಥ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದಲೂ ವಂಚಿತರಾಗುತ್ತಿದ್ದಾರೆ. ತಂದೆತಾಯಿಗಳಿಗೆ ಬಡತನವಿರುವುದರಿಂದಲೋ, ಅಥವಾ ಅವರ ನಿರ್ಲಕ್ಷ್ಯದಿಂದಲೋ ಈ ಹಸುಗೂಸುಗಳಿಗೆಲ್ಲಾ ಇಂಥ ಚಿಕ್ಕಪ್ರಾಯದಲ್ಲಿ ಈ ಪರಿಸ್ಥಿತಿ ಬಂದೊದಗಿದೆ. ಈ ಸಮಯದಲ್ಲಿ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಂಡರೆ ಅದು ಅಪರಾಧವಾಗಬಹುದು. ಹದಿನೈದು ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳನ್ನು ದಿನಕ್ಕೆ ೧೫ ತಾಸುಗಳವರೆಗೆ ಎಡಬಿಡದೇ ದುಡಿಸಿಕೊಳ್ಳಲಾಗುತ್ತದೆ. ಅಂಥವರಲ್ಲಿ ಕೆಲವರು